ಉತ್ತರ ತರಿಸತಕ್ಕಂಥ ಪ್ರಯತ್ನ ನಡೆದಿಲ್ಲವೆಂದು ನನ್ನ ಗಮನಸೆಳೆದಿದ್ದರು ಒಂದು ಸಮಾಧಾನದ ವಿಷಯ ಎಂದರೆ, ತಾವು ಈ ಸದನ ಮುಗಿಯುವುದರೊಳಗೆ ಈ ಪ್ರಶ್ನೆಗೆ ಉತ್ತರ ಒದಗಿಸಿಕೊಡತಕ್ಕಂಥ ಭರವಸೆ ಕೊಟ್ಟಿದ್ದೀರಿ. ಆದರೆ....

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ಒಬ್ಬ ಅಧಿಕಾರಿಯೂ ಒಂದು ಪೈಸೆ ಸಹ ಕೊಟ್ಟಿಲ್ಲ, ಆ ಕಾರಣಕ್ಕಾಗಿ ಅವರು ನಮಗೆ ಸಮಯಬೇಕೆಂದು ಹೇಳುತ್ತಿದ್ದಾರೆ. ನನ್ನ ಉದ್ದೇಶವೇನೆಂದರೆ, ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇದು ಯಾವ ರೀತಿ ನಡೆಯುತ್ತಿದೆ ಎಂದರೆ ಕೆಲವರು ತಮ್ಮ ಡ್ರೈವರನ್ನು ಮನೆಗೆ ಕಳುಹಿಸಿ, ನಮ್ಮ ಹೆಣ್ಣು ಕೊಟ್ಟ ಮಾವ ತೆಗೆದುಕೊಟ್ಟ ಕಾರು ಎಂದು ತಿಳಿದುಕೊಂಡು ಓಡಾಡುತ್ತಿದ್ದಾರೆ. ಇದನ್ನು ನಿಲ್ಲಿಸಬೇಕು. ಇದು ಶುದ್ಧ ಅವಮಾನದ ವಿಚಾರ.

ಶ್ರೀ ಮಾಟಾಳ್ ನಾಗರಾಜ್ : ಆ ಕಾರುಗಳಲ್ಲಿ ಇನ್ನು ಯಾರ್ಯಾರನ್ನೋ ಕರೆದುಕೊಂಡು ಓಡಾಡಿಸುತ್ತಿರುತ್ತಾರೆ. ಅನೇಕ ಜನರಿಗೆ ವಿಚಾರಗಳು ಗೊತ್ತಿರುವುದಿಲ್ಲ.

ಅಧ್ಯಕ್ಷರು : ಆಯಿತು. ಮಾನ್ಯ ವೆಂಕಟಪ್ಪನವರೇ ತಮ್ಮ ಪ್ರಶ್ನೆ ಕೇಳಿ.

ವಿದ್ಯುತ್ ಉತ್ಪಾದನೆಗೆ ಖಾಸಗಿಯವರೊಡನೆ ಕರಾರು

12 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಅಭಾವವನ್ನು ನೀಗಿಸಲು ಸರ್ಕಾರದವರು ಖಾಸಗಿಯವರೊಡನೆ ಕರಾರು ಮಾಡಿಕೊಂಡು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಆಲೋಚಿಸಿದ್ದಾರೆಯೇ

ಆ) ಹಾಗಿದ್ದಲ್ಲಿ ಮುಂದೆ ಬಂದಿರುವ ಖಾಸಗಿ ವ್ಯಕ್ತಿಗಳ ಸಂಖ್ಯೆ ಎಷ್ಟು, ಅವರುಗಳು ಹೂಡಲಿಚ್ಚಿಸಿರುವ ಹಣದ ಮೊತ್ತವೆಷ್ಟು, ಅವರ ಹೆಸರುಗಳೇನು

ಇ) ಅವರುಗಳ ಪೈಕಿ ಅನಿವಾಸಿ ಭಾರತೀಯರೆಷ್ಟು ;

ಈ) ಖಾಸಗಿಯವರು ಹೂಡಬೇಕೆಂದಿರುವ ಹಣದಿಂದ ಅಂದಾಜು ಎಷ್ಟು ಮೆಗಾವಾಟ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗಲಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು.)

ಅ) ಭಾರತ ಸರ್ಕಾರದ ಘೋಷಿತ ಧೋರಣೆಯನ್ವಯ ಖಾಸಗಿ ವಲಯಕ್ಕೆ ವಿದ್ಯುತ್ ಉತ್ಪಾದನೆ ವಹಿಸುವ ವಿಷಯ ಸರ್ಕಾರದ ಆಲೋಚನೆಯಲ್ಲಿದೆ. ಯಾರೊಂದಿಗೂ ಇದುವರೆವಿಗೂ ಕರಾರು ಮಾಡಿಕೊಂಡಿಲ್ಲ.

ಆ) ಈ ರೀತಿ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಭಾಗವಹಿಸಲು ಈವರೆಗೆ 29 ಖಾಸಗಿ ವ್ಯಕ್ತಿ ಹಾಗೂ ಸಂಸ್ಥೆಗಳು ಆಸಕ್ತಿ ವ್ಯಕ್ತಪಡಿಸಿದ್ದಾರೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ವಿದ್ಯುತ್ ಉತ್ಪಾದನೆಗೆ ಹೂಡಲಿರುವ ಹಣದ ಮೊತ್ತವು ವಿವಿಧ ಯೋಜನೆಗಳ ವಿದ್ಯುತ್ ಘಟಕಗಳ ಸಾಮರ್ಥ್ಯ ಮತ್ತು ಸ್ಥಾಪನಾ ವೆಚ್ಚಗಳನ್ನು ಅವಲಂಬಿಸಿರುತ್ತದೆ. ಈ ವಿಷಯದಲ್ಲಿ ಯಾರಿಂದಲೂ ನಿರ್ದಿಷ್ಟವಾದ ಮಾಹಿತಿ ಬಂದಿಲ್ಲ.

ಇ) ಅನಿವಾಸಿ ಭಾರತೀಯರು ಯಾರೂ ಮುಂದೆ ಬಂದಿಲ್ಲ.

ಈ) ಖಾಸಗಿಯವರು ಹೂಡುವ ಬಂಡವಾಳದಿಂದ ಒಟ್ಟು 3589 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಇದೆ.

ANNEXURE TO STARRED QUESTION NO: 12

PRIVATE INVESTMENT IN POWER GENERATION-RESPONSE RECEIVED TO THE ADVERTISEMENT.

Sl.No. Name of the / Person

FOR THERMAL PROJECTS:

1. M/s. Videocon International Ltd.,
   Aurangabad - 431006.
2. M/s.Klon & Marahalls,
   Manufactures and Exports (p) Ltd.,
   T.Nagar, Madras-600017.
3. M/s.Kusan Servo Component,
   M.I.D.C., Post office, Bhosari,
   Puna-411026.
4. M/s.Bhadrachalam Paper Boards Ltd.,
   Secunderbad-50003 (India)
5. M/s. Nordic Power Invest-AB,
   Stookkholm (Sweeden),
   through M/s. Tata Project Ltd., Bombay.
6. M/s. Birla Technical Services, New Delhi-110001.
7. M/s. Librerty Elecronics Pvt.Ltd.,Hubli-560030.
8. M/s.Orient Engineers, 228-A, Achrya Jagadish Chandra
   Calcutta-700020.
9. M/s. Hindustan Constuctions Co., Ltd., Bombay.
10. M/s. Pampasar Distillary Ltd., Hospet, Bellary.
11. M/s. Asia Foundation & Construction Ltd., Bombay.
12. M/s. Master Strips Pvt.Ltd., 68, Bommasandra Industrial Area, Anekal Taluk, Bangalore - 562158.
13. M/s.Pampasar Distillary Ltd.,103, Midford House. 1, Midford Gardens, Bangalore -560001.
14. M/s. British Electricity International Ltd., Westminister Tower, 3 Albert Embankment, London SE 1 7Sp.

II. FOR DIESEL AND GAS UNITS :

1. M/s. Bhadrachalam paper Boards Ltd., Secunderabad-560003 (India)

III. FOR MINI HYDEL PROJECTS :

1. M/s. Bhoruka Power Corporation Ltd., Lavello Road, Bangalore.
2. M/s. Oriental Marketing Poineers Syndicate, Riyadh (Soudhi Arabia), C/o.S.N. Palayana Coimbatore - 641007.
3. M/s. Sika Interplant Systoms Limited, Bangalore.
4. M/s. Escorts Limited, Yelahanka, Bangalore.
5. M/s B.T. Patil & Sons,
   Belgaum.
6. M/s. Maruthi Electrodes Private Ltd.,
   19/7, Maruthi Manson, Cunningham Road,
   Bangalore - 560052.
7. M/s. Naveen Mechanised Constructions Company Private Limited,Hubli.
8. M/s. Kayance Hotels,
   Gandhinagar, Bangalore.
9. M/s. Manipal Industries Limited,
   Bangalore.
10. M/s. Jai Gopal and Company, Madras.
11. Dandeli Steel and Ferro Alloys Limited, Dandli.
12. Asia Foundations and Construction Limited, Bombay.
13. Hindustan Wire Products Limited, Bangalore - 560036.
14. Panpasar distilleries, Bangalore - 560001.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಿದ್ಯುತ್ ಅಭಾವ ಹೆಚ್ಚು ಇದೆ. ಆದ್ದರಿಂದ ತಾವು ಆದಷ್ಟು ಬೇಗ ಕರಾರುಗಳನ್ನು ಖಾಸಗಿ ವ್ಯಕ್ತಿಗಳಿಂದ ಮಾಡಿಕೊಂಡು ವಿದ್ಯುತ್ ಹೆಚ್ಚು ಕೊಟ್ಟರೆ ಈ ಅಭಾವ ಸ್ವಲ್ಪ ಕಡಿಮೆ ಆಗಿ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಆದಷ್ಟು ಬೇಗ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಈ ವಿಚಾರದಲ್ಲಿ ಸರ್ಕಾರ ಕ್ರಮ ತೆಗೆದುಕೊಂಡಿರುವುದನ್ನು ಎಲ್ಲರೂ ಸ್ವಾಗತ ಮಾಡಿದ್ದಾರೆ. ಇವತ್ತು ಖಾಸಗಿ ಬಂಡವಾಳ ಹೂಡಿ ನಾವು ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಬೇಕನ್ನುವುದರಲ್ಲಿ ಎರಡೂ ಸದನಗಳಲ್ಲಿ ದ್ವಂದ್ವ ಅಭಿಪ್ರಾಯವಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಮತ್ತು ಈ ಸದನಕ್ಕೆ ಆಶ್ವಾಸನೆ ಕೊಡುವುದೇನೆಂದರೆ, ಅಷ್ಟು ಶೀಘ್ರವಾಗಿ ಖಾಸಗಿಯವರ ಬಂಡವಾಳವನ್ನು ಉಪಯೋಗಿಸಿಕೊಂಡು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕೆಂದಿದ್ದೇವೆ. ನಿಜ ಹೇಳಬೇಕದರೆ ಇದರ ಬಗ್ಗೆ ಸೆಂಟ್ರಲ್ ಗೌರ್ಮೆಂಟ್ ಆಕ್ಟ್‌ನಲ್ಲಿ ತಿದ್ದುಡಿ ಮಾಡಬೇಕಾಗುತ್ತದೆ. WE are already exerting lot of pressure to amend that

particular act. ಅದನ್ನು ನೋಡುತ್ತಿದ್ದೇವೆ. ಈ ಮಧ್ಯೆ ಬೇರೆ ಬೇರೆ ಜನ ಸಾಕಷ್ಟು ಪ್ರಮಾಣದಲ್ಲಿ ಬಂದಿರುವುದರಿಂದ ನಾವು ಶೀಘ್ರವಾಗಿ ತೀರ್ಮಾನ ಮಾಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : ನನ್ನ ಈ ಪ್ರಶ್ನೆಗೆ ಉತ್ತರವಾಗಿ ಅನಿವಾಸಿ ಭಾರತೀಯರು ಯಾರೂ ಮುಂದೆ ಬಂದಿಲ್ಲವೆಂದು ಹೇಳಿದ್ದೀರಿ. ಸರ್ಕಾರದವರು ಅವರನ್ನು ಕಾಂಟಾಕ್ಟ್ ಮಾಡಿಲ್ಲವೆ? ಅಥವಾ ಕಾಂಟ್ಯಾಕ್ಟ್ ಮಾಡದಿದ್ದರೆ ಈಗಲಾದರೂ ಮಾಡುವುದಕ್ಕೆ ಏರ್ಪಾಡು ಮಾಡುತ್ತಿರ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಕೆಲವರು ಎನ್.ಆರ್.ಐ.ಎನ್ನುವ ಹೆಸರಿನಲ್ಲಿ ಬಂದಿದ್ದರು. we have rejected ಎನ್ನುವುದಕ್ಕಿಂತ ನಾವು ಒಂದು ಮಾತನ್ನು ಇಲ್ಲಿ ಹೇಳಬೇಕು. ರಿಸರ್ವ್ ಬ್ಯಾಂಕ್ ರೂಲ್ಸ್ ಮತ್ತು ಫೆರಾ ರೂಲ್ಸ್ ಪ್ರಕಾರ ಮಾಡಬೇಕೆಂದು ನಾವು ಹೇಳಿದೆವು. ಕಾನೂನಿನ ಚೌಕಟ್ಟಿನೊಳಗೆ ಒಳಪಟ್ಟು ಎನ್.ಆರ್.ಐ. ನವರು ಬರಬೇಕು ಹಾಗಿದ್ದರೆ ಮಾತ್ರ ನಾವು ಅಕ್ಸೆಪ್ಟ್ ಮಾಡಿಕೊಳ್ಳಬಹುದು. ಸುಮ್ಮನೆ ಅವರನ್ನು ಸೇರಿಸಿಕೊಂಡು ಇನ್ನೊಂದು ದೊಡ್ಡ ಪುರಾಣ ಆಗುವುದು ಬೇಡವೆಂದು ಸುಮ್ಮನೆ ಆದೆವು. ಬೇರೆ ಎನ್. ಆರ್.ಐ.ನವರು ನಿನ್ನೆ ಅಲ್ಲ ಮೊನ್ನೆ ಬಂದು ನಾವು ರಿಸರ್ವ್ ಬ್ಯಾಂಕ್ ರೂಲ್ಸ್ ಮತ್ತು ಫೆರಾ ರೂಲ್ಸ್ ಪ್ರಕಾರ ಮಾಡುತ್ತೇವೆಂದು ಹೇಳಿದ್ದಾರೆ. ಅದಾದ ಮೇಲೆ ಅದರ ಬಗ್ಗೆ ಸದನಕ್ಕೆ ತಿಳಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದೆರಡು ವಿವರಣೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಮುಖ್ಯವಾಗಿ, 250 ಮೆಗಾವಾಟ್‌ಗಿಂತ ಹೆಚ್ಚು ಉತ್ಪತ್ತಿ ಮಾಡತಕ್ಕಂಥ ವಿದ್ಯುತ್ ಘಟಕಗಳನ್ನು ಸ್ಥಾಪನೆ ಮಾಡಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಬೇಕಾಗುತ್ತದೆ. ಇದರ ಜೊತೆಗೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದರಿಂದ ಪರಿಸರ ಮಾಲಿನ್ಯವಾಗುತ್ತದೆ. ಇದೂ ಸಹಾ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಇದನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಹಾಕಿಕೊಂಡಿರುವ ಕ್ರಮ ಏನು? ಎರಡನೆದಾಗಿ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಒಟ್ಟಾರೆ ಖಾಸಗೀ ಮೂಲಗಳಿಂದ ಉತ್ಪತ್ತಿಯಾದ ವಿದ್ಯುಚ್ಛಕ್ತಿಯನ್ನು ಜನರಲ್ ಗ್ರಿಡ್‌ಗೆ ಕೊಡಬೇಕಾಗುತ್ತದೆ. ಈ ಗ್ರಿಡ್ ಮೂಲಕ ಸಹ ಹಂಚಿಕೆಯಾದರೆ ಈಗ ಉತ್ಪಾದನೆ ಮಾಡತಕ್ಕಂಥ ಕೈಗಾರಿಕೋದ್ಯಮಿಗಳಿಗೆ ಸರಿಯಾದ ಕಾಲದಲ್ಲಿ ಕೆ.ಇ.ಬಿ.ಯಿಂದಾಗಲಿ ಮೈಸೂರು ಪವರ್ ಕಾರ್ಪೋರೇಷನ್‌ನಿಂದಾಗಲಿ ಹಣ ಪಾವತಿಯಾಗುವುದಿಲ್ಲ ಎನ್ನುವುದು ಎರಡನೆ ತೊಂದರೆ. ಮೂರನೆಯದು, ಇನ್‌ವೆಸ್ಟ್‌ಮೆಂಟಿಗೆ ಖಾಸಗಿಯವರು ಸಾರ್ವಜನಿಕ ಹಣಕಾಸು ಸಂಸ್ಥೆಗಳನ್ನು ಅವಲಂಬಿಸಿರುತ್ತಾರೆ. ಕೆ.ಎಸ್.ಎಫ್.ಸಿ. ಇರಬಹುದು ಅಥವಾ ಬ್ಯಾಂಕುಗಳು ಇರಬಹುದು. ಈ ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ ಇಂತಹ ಖಾಸಗಿಯವರಿಗೆ ಹಣಕಾಸು ಒದಗಿಸುವಂಥ ದಿಸೆಯಲ್ಲಿ ಸರ್ಕಾರದ ಆಲೋಚನೆಗಳು ಏನು?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ವಿದ್ಯುಚ್ಛಕ್ತಿ ಉತ್ಪಾದನೆಗೆ ಖಾಸಗಿಯವರಿಗೆ ಆಧ್ಯತೆ ಕೊಡುತ್ತೇವೆಂದು ಪ್ರಕಟನೆ ಹೊರಡಿಸಿದ ಮೇಲೆ ಅದಕ್ಕೆ ಬಹಳ ಬೆಂಬಲ ಕಂಡು ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದಲ್ಲಿ ಕಾನೂನು ತಿದ್ದುಪಡಿಯಾಗಬೇಕಾಗಿದೆ. ಇದನ್ನು ಮಾನ್ಯ ವೆಂಕಟಪ್ಪನವರಿಗೆ ಉತ್ತರ ಕೊಡುವಾಗಲೇ ಹೇಳಿದ್ದೇನೆ. ಇದರಲ್ಲಿ ಬಂಡವಾಳ ಹೂಡುತ್ತೇನೆಂದು ಬಹಳ ಜನ ಮುಂದೆ ಬಂದಿದ್ದಾರೆ. ಆ ವಿವರಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ್ದರೆ ನಾಳೆ ಪವರ್ ಕಾರ್ಪೋರೇಷನ್ ಮುಖಾಂತರ ನಾವು ನಷ್ಟ ಅನುಭವಿಸಬೇಕಾಗುತ್ತದೆ. ಇಲ್ಲವೇ ಕಾನೂನು ಪ್ರಕಾರ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ For that Iam not prepared.

ತಮ್ಮ ಗಮನಕ್ಕೂ ಬಂದಿರುವ ಹಾಗಿದ್ದರೆ ಆಸ್ಟ್ರೇಡ್ ಎಂತನೇನೋ ಆಸ್ಟ್ರೇಲಿಯಾದ ಹೈ ಕಮೀಷನರ್ ಮುಖಾಂತರ ಇವತ್ತು ಬೆಳಿಗ್ಗೆ ಒಂದು ಇನ್‌ಫರ್‌ಮೇಷನ್ ಬಂದಿದೆ. ಆಸ್ಟ್ರೇಲಿಯ ಸರ್ಕಾರ ತನ್ನ ಏಜೆನ್ಸಿ ಮೂಲಕ ಇದನ್ನು ಮಾಡಲು ಮತ್ತು ಹಣ ತೊಡಗಿಸಲು ಮುಂದೆ ಬಂದಿದೆ. The Austrialia Charcol has got 10% ash content. ನಮ್ಮ ಚಾರ್ಕೋಲ್‌ನಲ್ಲಿ 50 ಪರ್ಸೆಂಟ್ ಬೂದಿ ಬರುತ್ತದೆ ಎನ್ನತಕ್ಕ ಒಂದು ಅಭಿಪ್ರಾಯ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಹತ್ತಿರ ಚಾರ್ಕೋಲ್ ಶಾರ್ಟೇಜ್ ಇದೆ. ಉದಾಹರಣೆಗೆ ರಾಯಚೂರು ಥರ್ಮಲ್ ಪ್ಲಾಂಟ್ ಇದೆ. ನಮ್ಮ ಶಾಖೋತ್ಪನ್ನಕ್ಕೆ ಇರತಕ್ಕ ಚಾರ್ಕೋಲ್‌ಗಾಗಿ ನಾವು ಒದ್ದಾಟ ಮಾಡುತ್ತೇವೆ. ರೈಲಿಗೆ ತೊಂದರೆ ಆಗತಕ್ಕಂಥಹದು, 50 ಪರ್ಸೆಂಟ್ ಬೂದಿ ಇದ್ದರೂ ಕೂಡ ಚಾರ್ಕೋಲ್‌ಗೆ ತೊಂದರೆ ಬರುತ್ತದೆ. ಆಸ್ಟ್ರೇಲಿಯಾದ ಚಾರ್ಕೋಲ್ ಏನು ಇದೆ ಆದರಲ್ಲಿ 10 ಪರ್ಸೆಂಟ್ ಮಾತ್ರ ಬೂದಿ ಬರುತ್ತದೆ. 90 ಪರ್ಸೆಂಟ್ ನಮಗೆ ಶಾಖ ಉತ್ಪತ್ತಿ ಮಾಡುತ್ತದೆ ಎನ್ನತಕ್ಕ ಅಭಿಪ್ರಾಯ ಇದೆ. ನಾನು ವಿವರಗಳಿಗೆ ಈ ಸಂದರ್ಭದಲ್ಲಿ ಹೋಗುವುದಿಲ್ಲ. ಏಕೆಂದರೆ ಇದು ಪ್ರಶ್ನೋತ್ತರ ವೇಳೆ. ನಾನು ನಿಮ್ಮ ಹತ್ತಿರ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ನಾನು ಬೇಕಾದರೆ ನಿಮಗೆ ವಿವರಗಳನ್ನು ಕೊಡುವುದಕ್ಕೆ ಸಿದ್ದನಿದ್ದೇನೆ. ವಿಷಯ ಏನು ಅಂದರೆ ಈ ರೀತಿ ಬಂದಾಗ ಅವರ ಟರ್ಮ್ಸ್ ಅಂಡ್ ಕಂಡೀಷನ್ಸ್ ಏನು ಇದೆ ಎನ್ನತಕ್ಕದ್ದನ್ನು ಸ್ವಲ್ಪ ನೋಡಿಕೊಳ್ಳತಕ್ಕ ಅವಶ್ಯಕತೆ ಇದೆ. ಅವರು ಬರಲಿ, ಸಂಪೂರ್ಣವಾಗಿ ವಿವರಗಳು ಸಿಗಲಿ. ನಾನು ಈಗಾಗಲೇ ಹೇಳಿದ್ದೇನೆ. 1948ರ ಅಕ್ಟ್‌ಗೆ ಅಮೆಂಡ್‌ಮೆಂಟ್ ಆಗಿಬಿಟ್ಟರೆ ಬಹಳ ಜನ ಮುಂದೆ ಬರುವುದಕ್ಕೆ ತಯಾರು ಇದ್ದಾರೆ. ನಾವು ಸಹ ಒತ್ತಡ ಹಾಕಿದ್ದೇವೆ. ಮೊನ್ನೆ ತಾನೇ ನಡೆದಂತಹ ವಿದ್ಯುತ್ ಸಚಿವರ ಒಂದು ಸಮ್ಮೇಳನದಲ್ಲಿ ಕೂಡ ತೀರ್ಮಾನ ಮಾಡಿದ್ದಾರೆ. ಎಲ್ಲಾ ರಾಜ್ಯದವರು ಕೂಡ ನೀವು ಅಮೆಂಡ್‌ಮೆಂಟ್ ಮಾಡಬೇಕು ಎಂದು ಹೇಳಿದ್ದಾರೆ. ನಮ್ಮ ಒತ್ತಡಕ್ಕೆ ಮಣಿದಾದರೂ ನೀವು ಅಮೆಂಡ್ ಮಾಡಲೇಬೇಕು ಅಮೆಂಡ್ ಮಾಡದೇ ಇದ್ದರೆ ಕ್ಯಾಪ್ಟಿವ್ ಪವರ್ ಜನರೇಷನ್ ಇರಬಹುದು, ಅಥವಾ ಅಪೆಟು ಸರ್ಟೆನ್ ಲಿಮಿಟ್ಸ್ ಇರಬಹುದು, ಯಾವೂ ಕೂಡ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದ ಮೇಲೆ ಕೇಂದ್ರದವರು ಕೂಡ ಒಪ್ಪಿಗೆ ಕೊಡುವ ಸೂಚನೆ ಒಂದು ಬಂದಿದೆ. ಇದರ ಜೊತೆಗೆ ಇನ್ಸ್‌ಸ್ಟಿಟ್ಯೂಷನಲ್ ಫೈನಾನ್ಸ್ ಬಗ್ಗೆ ಕೂಡ ತಾವು ಹೇಳಿದ್ದೀರಿ. ಅದನ್ನು ಕೂಡ ಸಂದರ್ಭ ಬಂದಾಗ ನೋಡಿ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಮೊದಲು ಇದಕ್ಕೆ ರೆಸ್ಪಾನ್ಸ್ ಎನು ಎನ್ನುವುದನ್ನು ಸರಿಯಾಗಿ ನೋಡಬೇಕಾಗುತ್ತದೆ. Where we actually stand so far as our advertisement is concerned. ಆಕ್ಚುಯಲಿ ನನ್ನ ಹತ್ತಿರ ಕೆಲವು ಪಟ್ಟಿ ಇದೆ. ಯಾರ್ಯಾರು ಬಂದಿದ್ದಾರೆ, ಏನು ಮಾಡಿದ್ದಾರೆ ಎನ್ನುವ ಬಗ್ಗೆ ವಿಚಾರಕ್ಕೆ ಹೋಗದಿದ್ದರೂ ಕೂಡ ಒಳ್ಳೆಯ ರೆಸ್ಪಾನ್ಸ್ ಕಂಡು ಬಂದಿದೆ ಎಂದು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ. ಬೈರೇಗೌಡ : ಹಿಂದೆ ಕೋಲಾರದಲ್ಲಿ ಒಂದು ಜನರೇಟಿಂಗ್ ಸ್ಟೇಷನ್ ಸ್ಥಾಪನೆ ಮಾಡಬೇಕು ಎಂಬ ಬಗ್ಗೆ ಸರ್ಕಾರ ಒಂದು ತೀರ್ಮಾನ ಮಾಡಿತು. ಆದರೆ ಅದು ಕಾರ್ಯಗತ ಆಗಲಿಲ್ಲ, ಈಗ ಹೊಸದಾಗಿ ತಾವು ಖಾಸಗಿ ರಂಗದಲ್ಲಿದ್ದವರನ್ನು ಆಹ್ವಾನ ಮಾಡುವುವರಿದ್ದೀರಿ. ಇಂತಹ ಸಂದರ್ಬದಲ್ಲಿ ಕೋಲಾರದಲ್ಲಿ ಒಂದು ಜನರೇಟಿಂಗ್ ಸ್ಟೇಷನ್ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಡೀಸಲ್ ಆಗಬಹುದು ಅಥವಾ ಥರ್ಮಲ್ ಆಗಬಹುದು. ಯಾವುದಾದರೂ ಒಂದನ್ನು ಹಾಕುವುದಕ್ಕೆ ತಾವು ಆಶ್ವಾಸನೆ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಈ ವಿಚಾರ ಕೂಡ ಪಟ್ಟಿಯಲ್ಲಿದೆ. ಕೋಲಾರವನ್ನು ಒಳಗೊಂಡಂತೆ ಸುಮಾರು 4-5 ಕಡೆಗಳಲ್ಲಿ ಹಾಕತಕ್ಕಂಥ ಯೋಚನೆ ಇದೆ. ಈಗ ನಾವು ಯಲಹಂಕದಲ್ಲಿ ಏನು ಮಾಡುತ್ತಿದ್ದೆವೆ. ಅದೇ ರೀತಿಯಾಗಿ ಕೋಲಾದ ಕೂಡ ಆದರಲ್ಲಿ ಸೇರಿಕೊಂಡಿದೆ. ನಮ್ಮ ಆದ್ಯತಾ ಪಟ್ಟಿಯಲ್ಲಿ ಕೂಡ ಅದು ಇದೆ. ಅದಕ್ಕೆ ನಾವು ಗಮನ ಕೊಟ್ಟಿದ್ದೇವೆ. ಏಕೆಂದರೆ ಡೀಸಲ್ ಪರಿಸ್ಥಿತಿಯಲ್ಲಿ ಇನ್ನು ಮುಂದೆ ತೊಂದರೆ ಬರಲಾರದು ಈಗ ತೊಂದರೆ ಬಂದರೂ ಕೂಡ ಒಂದುವೇಳೆ ಗಲ್ಫ್ ವಾರ್ ನಿಂತಿರಲಿಲ್ಲ ಎಂದು ಇಟ್ಟುಕೊಳ್ಳೋಣ, ಅದು ಯಾವಾಗಲೂ ನಡೆದುಕೊಳ್ಳುತ್ತಾ ಇರುವುದಕ್ಕೆ ಆಗುವುದಿಲ್ಲ ಅಷ್ಟರೊಳಗೆ ನಾವು ಸಿದ್ಧತೆಗಳನ್ನು ಮಾಡಿಕೊಂದು ರಡಿ ಇರಬೇಕಾಗುತ್ತದೆ. ಕೋಲಾರವನ್ನು ನಾವು ಪಟ್ಟಿಯಲ್ಲಿ ಇಟ್ಟುಕೊಂಡಿದ್ದೇವೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು : ಮಾನ್ಯ ಅಧ್ಯಕ್ಷರೇ, ಈಗಾಗಲ ಮಾನ್ಯ ಮುಖ್ಯಮಂತ್ರಿಗಳು ವಿದ್ಯುತ್ತನ್ನು ಉತ್ಪಾದಿಸುವ ವಿಷಯದ ಬಗ್ಗೆ ಸಾಕಷ್ಟು ವಿವರವಾದ ಒಂದು ಚಿತ್ರವನ್ನು ಈ ಸದನದಲ್ಲಿ ಹೇಳಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಸರ್ಕಾರದವರು ನಮ್ಮ ರಾಜ್ಯದಲ್ಲಿ ಆರು ಹೊಸ ಡೀಸಲ್ ವಿದ್ಯುತ್ ಜನರೇಟರ್‌ಗಳನ್ನು ಸ್ಥಾಪನೆ ಮಾಡುವ ಉದ್ದೇಶ ಇಟ್ಟುಕೊಂಡು ಹಿಂದಿನ ಮುಖ್ಯಮಂತ್ರಿಗಳು ಪದೇ ಪದೇ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದರು. ನಮ್ಮ ಬೀದರ್ ಜಿಲ್ಲೆಯಲ್ಲಿ ಕೂಡ ಒಂದು ಹೊಸ ಡೀಸಲ್ ಜನರೇಟರ್ ಸ್ಥಾಪನೆ ಮಾಡುವ ವಿಷಯದ ಬಗ್ಗೆ ಹೇಳಿದ್ದಾರೆ. ರೈತರಿಗೆ ವಿದ್ಯುತ್ತಿನ ತೊಂದರೆ ಇರುವುದರಿಂದ ಆ ತೊಂದರೆಯನ್ನು ನೀಗಿಸುವ ಉದ್ದೇಶದಿಂದ ಈ ಡೀಸಲ್ ಜನರೇಟರನ್ನು ಸ್ಥಾಪನೆ ಮಾಡುವುದು ಅತ್ಯಂತ ಅವಶ್ಯಕ. ನಮ್ಮ ರಾಜ್ಯದಲ್ಲಿ ಸ್ಥಾಪಿಸುವ ಆರು ಡೀಸಲ್ ಜನರೇಟರ್‌ಗಳಲ್ಲಿ ವಿಶೇಷವಾಗಿ ಬೀದರ್‌ಗೆ ಆದ್ಯತೆ ಕೊಟ್ಟು ಒಂದು ವಿದ್ಯುತ್ ಜನರೇಟರನ್ನು ಮಂಜೂರಾತಿ ಮಾಡುವ ಸಲುವಾಗಿ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ನಿರೀಕ್ಷಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನಾವು ಡೀಸಲ್‌ನಿಂದ ವಿದ್ಯುತ್ತನ್ನು ಉತ್ಪತ್ತಿ ಮಾಡುವುದಕ್ಕೆ ವಿಚಾರದಲ್ಲಿ ಎಷ್ಟು ಗಮನವನ್ನು ನಾವು ಕೊಡುತ್ತೇವೋ ಅದೇ ರೀತಿ ಪ್ರಾದೇಶಿಕ ಅಸಮಾನತೆಯನ್ನು ತೊಡೆದು ಹಾಕತಕ್ಕ ವಿಚಾರದಲ್ಲಿ ಸಹ ನಾವು ಗಮನವನ್ನು ಕೊಡತಕ್ಕ ಅವಶ್ಯಕತೆ ಇದೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಅನುಮೊದನೆ ಮಾಡುತ್ತೇನೆ. ಹೈದರಾಬಾದ್ - ಕರ್ನಾಟಕ, ಬೀದರ್ ಎಂದು ಹೇಳಲಾರೆ. ಏಕೆಂದರೆ ಈಗ ನನ್ನ ಹತ್ತಿರ ವಿವರಗಳಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಂಜೂರಾತಿ ಆಗಿದೆ. ಅದಕ್ಕೆ ಏನು ಮಾಡುತ್ತೇವೆ ಎಂದು ಹೇಳಿಲ್ಲ. ಅದನ್ನು ನಾವು ಕೇಳುತ್ತಿರುವುದು.

ಶ್ರೀ ಎಸ್. ಬಂಗಾರಪ್ಪ : ನಾನು ನೋಡುತ್ತೇನೆ. ಅದು ಈ ಪ್ರಶ್ನೆಗೆ ಬರಲಿಲ್ಲವಾದ್ದರಿಂದ ನಾನು ಹೇಳಲಿಲ್ಲ. ಇದ್ದರೆ ನಾನು ಏಕೆ ಇಲ್ಲ ಎಂದು ಹೇಳಲಿ, ಗುರುಪಾದಪ್ಪನವರೇ, ಇದ್ದರೆ ಇದೆ ಎಂದು ಹೇಳತಕ್ಕ ಸ್ವಭಾವ ಇದೆ. ಅದು ಮೊದಲೇ ಇದ್ದರೆ ಯಸ್. ಎಂದು ಹೇಳುತ್ತೇನೆ. ಇದರ ಬಗ್ಗೆ ಅನುಮಾನ ಬೇಕಾಗಿಲ್ಲ. ಹಾಗಿದ್ದರೆ ಮಾಡೋಣ.

ಸರಪಾಡಿ ಅಣೆಕಟ್ಟು ಯೋಜನೆಯಲ್ಲಿ ವಸತಿ ಗೃಹ, ಶಾಲೆ, ಆಸ್ಪತ್ರೆ ಇತ್ಯಾದಿಗಳ ನಿರ್ಮಾಣ

458 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?